ಕರ್ನಾಟಕ ಸರ್ಕಾರ
**ಮಕ್ಕಳ ರಕ್ಷಣಾ ನಿರ್ದೇಶನಾಲಯ**
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ, 03ನೇ ಮಹಡಿ, ಡಾ॥ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560 001
E-mail ID: icps.kar@gmail.com Ph.No.080-22867381/82/83

ಸಂಖ್ಯೆ: ಸಂ.ಕರಾಸಮರಸೊ/ತರಬೇತಿ/IST/21 /19-20 ದಿನಾಂಕ: ~~15~~ 16-09-2022

ಗೆ,

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಎಲ್ಲಾ ಜಿಲ್ಲೆಗಳು

ಮಾನ್ಯರೆ,

ವಿಷಯ:- ಬಾಲನ್ಯಾಯ ಕಾಯ್ದೆ 2015 ರ ಕಲಂ 107 ಹಾಗೂ ಮಾದರಿ ನಿಯಮ 2016 ನಿಯಮ 86 ರ ಪ್ರಕಾರ ಮಕ್ಕಳ ವಿಶೇಷ ಪೋಲಿಸ್ ಘಟಕಗಳ ಅಧಿಕಾರಿಗಳಿಗೆ ತರಬೇತಿ ನೀಡುವ ಕುರಿತು.

ಉಲ್ಲೇಖ:- ಪೋಲಿಸ್ ಮಹಾ ನಿರ್ದೇಶಕರು ಹಾಗೂ ನೋಡಲ್ ಅಧಿಕಾರಿಗಳು ಮಕ್ಕಳ ವಿಶೇಷ ಪೋಲಿಸ್ ಘಟಕ (SJPU) ಕರ್ನಾಟಕ ರಾಜ್ಯ ಬೆಂಗಳೂರು ಇವರ ಪತ್ರ ಸಂಖ್ಯೆ: (SJPU) /47/ICPS/2022-23 ದಿನಾಂಕ:06-06-2022.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: HD 20 PCC 2021 ಬೆಂಗಳೂರು, ದಿನಾಂಕ 29.06.2021 ರ ಅನ್ವಯ, ಹೊಸದಾಗಿ 50 ಮಕ್ಕಳ ವಿಶೇಷ ಪೋಲಿಸ್ ಘಟಕಗಳನ್ನು ರಾಜ್ಯಾದ್ಯಂತ ಸ್ಥಾಪಿಸಲಾಗಿದ್ದು (SJPU) ಈ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೋಲಿಸ್ ಅಧಿಕಾರಿಗಳು, ಸಿಬ್ಬಂದಿಗಳಿಗೆ ಹಾಗೂ ಸಮಾಜಕಾರ್ಯಕರ್ತರಿಗೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ನೆರವಾಗುವಂತೆ ಬಾಲನ್ಯಾಯ ಕಾಯ್ದೆ (ಪಾಲನೆ ಮತ್ತು ರಕ್ಷಣೆ) 01-09-2022, ಮಕ್ಕಳ ಜೊತೆಗಿನ ಸಂವಹನ ಕೌಶಲ್ಯ, ಮಕ್ಕಳ ಸ್ನೇಹಿ ವರ್ತನೆ ಇತ್ಯಾದಿ ಕುರಿತು ಸೂಕ್ತ ತರಬೇತಿ ನೀಡಬೇಕಾದ ಅಗತ್ಯವಿರುತ್ತದೆ. ಬಾಲನ್ಯಾಯ ಮಾದರಿ ನಿಯಮಗಳು 2016 ರ ನಿಯಮ 85(21) ರ ಅನ್ವಯ ಮಕ್ಕಳ ಕಲ್ಯಾಣ ಪೋಲಿಸ್ ಅಧಿಕಾರಿಗಳನ್ನು ಒಳಗೊಂಡಂತೆ ಇತರೆ ಭಾಗಿದಾರರುಗಳ ಸಾಮರ್ಥ್ಯವರ್ಧನೆಗಾಗಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಇತರೆ ಇಲಾಖೆಗಳ ಸಹಯೋಗದೊಂದಿಗೆ ತರಬೇತಿ ಕಾರ್ಯಗಾರಗಳನ್ನು ಆಯೋಜನೆ ಮಾಡಬೇಕಾದ ಅಗತ್ಯವಿದೆ ಎಂದು ಉಲ್ಲೇಖಿತ ಪತ್ರದಲ್ಲಿ ಮಾನ್ಯ ಪೋಲಿಸ್ ಮಹಾನಿರ್ದೇಶಕರು (ತರಬೇತಿ) ಸೂಚಿಸಿರುತ್ತಾರೆ.

ಆದ್ದರಿಂದ ಪ್ರತೀ ಜಿಲ್ಲೆಗಳ ಪೋಲಿಸ್ ಇಲಾಖೆಯಲ್ಲಿ, ಠಾಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಕ್ಕಳ ಕಲ್ಯಾಣ ಪೋಲಿಸ್ ಅಧಿಕಾರಿಗಳಿಗೆ, ಸಮಾಜ ಕಾರ್ಯಕರ್ತರಿಗೆ ಇತರೆ ಇಲಾಖೆಗಳ ಭಾಗೀದಾರರಿಗೆ, ಪೋಲಿಸ್ ಇಲಾಖೆಯ ಹಿರಿಯ ಅಧಿಕಾರಿಗಳು, DLSA ಹಾಗೂ UNICEF ನ ಸಂಪನ್ಮೂಲ ವ್ಯಕ್ತಿಗಳ ನೆರವಿನೊಂದಿಗೆ ತರಬೇತಿ ಕಾರ್ಯಗಾರವನ್ನು ಆಯೋಜಿಸಬೇಕೆಂದು ಸೂಚಿಸಿದೆ.

ತರಬೇತಿಯ ಮಾದರಿ ಶೆಡ್ಯೂಲ್ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

ಈ ತರಬೇತಿ ಕಾರ್ಯಗಾರವನ್ನು ದಿನಾಂಕ 30–09–2022 ರ ಒಳಗೆ ಕಡ್ಡಾಯವಾಗಿ ಆಯೋಜಿಸಿ ಅನುಪಾಲನಾ ವರದಿಯನ್ನು ಛಾಯಾಚಿತ್ರ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

# ಮಕ್ಕಳ ರಕ್ಷಣಾ ನಿರ್ದೇಶನಾಲಯ

## ಜಿಲ್ಲಾ ಮಟ್ಟದ ಮಕ್ಕಳ ವಿಶೇಷ ಪೊಲೀಸ್ ಘಟಕದ ಅಧಿಕಾರಿಗಳಿಗೆ ಮಕ್ಕಳ ಪೋಷಣೆ ಮತ್ತು ರಕ್ಷಣೆಯ ವಿವಿಧ ಆಯಾಮಗಳ ಕುರಿತು ಅನುಷ್ಠಾನ ಪ್ರಕ್ರಿಯ ತರಬೇತಿ.

### ತರಬೇತಿಯ ವೇಳಾಪಟ್ಟಿ

| ಕ್ರ. ಸಂ | ದಿನಾಂಕ | ವಿಷಯ | ಸಂಪನ್ಮೂಲ ವ್ಯಕ್ತಿಗಳು |
|---|---|---|---|
| | ಬೆಳಗಿನ ಅಧಿವೇಶನ | | |
| 1 | 9.30 ರಿಂದ 10.00 ರ ವರೆಗೆ | ನೋಂದಣಿ | |
| 2. | 10.00 ರಿಂದ 10.30 ರ ವರೆಗೆ | ಉದ್ಘಾಟನಾ ಸಮಾರಂಭ | |
| 3. | 10.30 ರಿಂದ 11.30 ರ ವರೆಗೆ | ಅಧಿವೇಶನ <u>- 1</u><br>ಮಕ್ಕಳ ವಿಶೇಷ ಪೋಲಿಸ್ ಘಟಕದ ಮೂಲಕ –ಬಾಲನ್ಯಾಯ ಮಕ್ಕಳ ಪೋಷಣೆ ಮತ್ತು ರಕ್ಷಣೆ ಕಾಯ್ದೆ 2015 ನಿಬಂಧನೆಗಳ ಅನುಷ್ಠಾನ ಪ್ರಕ್ರಿಯೆ ಕುರಿತು ಮಾಹಿತಿ ಜಿಲ್ಲೆಯಲ್ಲಿ ಮಕ್ಕಳ ವಿಶೇಷ ಪೋಲಿಸ್ ಘಟಕದ ಪಾತ್ರ, ಪಾತ್ರಗಳು ಮತ್ತು ಜವಾಬ್ದಾರಿಗಳು, ಮಕ್ಕಳ ರಕ್ಷಣೆಗಾಗಿ ಸಹಭಾಗಿ ಇಲಾಖೆಗಳು ಸಂಸ್ಥೆಗಳೊಂದಿಗೆ ಸಮನ್ವಯ ಮತ್ತು ಸಂಘಟಿತ ಪ್ರಯತ್ನ ಸಾಧಿಸುವ ಕುರಿತು. | |
| 4. | 11.30 ರಿಂದ 11.45 ರ ವರೆಗೆ | ಚಹಾ ವಿರಾಮ | |
| 5. | 11.45 ರಿಂದ 12.45 ರ ವರೆಗೆ | ಅಧಿವೇಶನ –2 : ಮಕ್ಕಳ ಹಕ್ಕುಗಳ ಕುರಿತು ಮಕ್ಕಳ ಹಕ್ಕುಗಳ ಪ್ರಮುಖ ಅಂಶಗಳು ತತ್ವಗಳು, ಮತ್ತು ವಿವಿಧ ಶಾಸನಗಳ | |

| | | | |
|---|---|---|---|
| | | ಅನುಷ್ಠಾನದ ಕುರಿತು ಭಾಗವಹಿಸುವವರಿಗೆ ಸಮಗ್ರ ಮಾಹಿತಿ. | |
| 6. | 12.45 ರಿಂದ 1.45 ರ ವರೆಗೆ | ಅಧಿವೇಶನ – 3: POCSO ಕುರಿತು. POCSO ಕಾಯಿದೆಯ ನಿಬಂಧನೆಗಳ ಬಗ್ಗೆ ಹಾಗೂ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ಕುರಿತು ಜಾಗೃತಿಯನ್ನು ಮೂಡಿಸುವಲ್ಲಿ SJPU ನ ಪಾತ್ರ ಅನುಷ್ಠಾನ ಹಾಗೂ POCSO ಕಾಯ್ದೆ ಪ್ರಕ್ರಿಯೆ ಕುರಿತು. | |
| 7. | 1.45 ರಿಂದ 2.30 ರ ವರೆಗೆ | ಊಟದ ಸಮಯ | |
| | ಮಧ್ಯಾಹ್ನದ ಅಧಿವೇಶನ | | |
| 8. | 2.30 ರಿಂದ 3.15 ರ ವರೆಗೆ | ಅಧಿವೇಶನ–4: ಬಾಲ್ಯವಿವಾಹದ ಕುರಿತು. ಬಾಲ್ಯವಿವಾಹ ನಿಷೇಧ ಕಾಯಿದೆಯ ನಿಬಂಧನೆಗಳ ಕುರಿತು ಅನುಷ್ಠಾನ ಪ್ರಕ್ರಿಯೆ ಮಾಹಿತಿ ಹಾಗೂ ಬಾಲ್ಯವಿವಾಹಗಳನ್ನು ತಡೆಗಟ್ಟುವಲ್ಲಿ SJPU ಪಾತ್ರದ ಕುರಿತು ಮಾಹಿತಿ. | |
| 9. | 3.15 ರಿಂದ 4.30 ರ ವರೆಗೆ | ಅಧಿವೇಶನ – 5: ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳು ಮತ್ತು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಜೊತೆಗಿನ ಸಂವಹನದಲ್ಲಿ ಮಕ್ಕಳ ಸ್ನೇಹಿ ವರ್ತನೆ / ನಡವಳಿಕೆ ಹೇಗಿರಬೇಕೆಂಬುದರ ಕುರಿತು. | |
| 10. | 4.30 ರಿಂದ 4.45 ರ ವರೆಗೆ | ಚಹಾ ವಿರಾಮ | |

| | | | |
|---|---|---|---|
| 11. | 4.45 ರಿಂದ 5.30 ರ ವರೆಗೆ | ಅಧಿವೇಶನ - 6 :<br>ತೆರೆದ ಮನೆ ಕಾರ್ಯಕ್ರಮದ ಕುರಿತು, ವಿವಿಧ ಮಕ್ಕಳ ರಕ್ಷಣೆ ಸಮಸ್ಯೆಗಳು ಮತ್ತು ಪ್ರತಿಕ್ರಿಯೆ ಕಾರ್ಯವಿಧಾನಗಳ ಅನುಷ್ಠಾನ ಪ್ರಕ್ರಿಯೆಯ ಭಾಗವಾಗಿ ತೆರೆದ ಮನೆ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಅದರನ್ವಯ ಶಾಲಾವಾರು ಮತ್ತು ತಂಡವಾರಾಗಿ ಮಕ್ಕಳು ಸಮೀಪದ ಪೊಲೀಸ್ ಠಾಣೆಗೆ ಭೇಟಿ ನೀಡುತ್ತಾರೆ ಮತ್ತು ಶಾಲೆಗಳು ದೂರದಲ್ಲಿದ್ದರೆ ಪೊಲೀಸ್ ಅಧಿಕಾರಿಗಳು ಶಾಲೆಗೆ ಭೇಟಿ ನೀಡುತ್ತಾರೆ ಮತ್ತು ಪ್ರತಿ ಗುರುವಾರ 1 ಗಂಟೆಗಳ ಕಾಲ ತೆರೆದ ಮನೆ ಕಾರ್ಯಕ್ರಮಗಳನ್ನು ನಡೆಸಬೇಕು. | |
| 12 | 5.30 ರಿಂದ 6.00 ರ ವರೆಗೆ | ಸಮಾರೋಪ | |

ನಿರ್ದೇಶಕರು

ಮಕ್ಕಳ ರಕ್ಷಣಾ ನಿರ್ದೇಶನಾಲಯ